**OS 114/2022**

**<u>ಪಿ.ಡಬ್ಲ್ಯೂ: 1</u>**

**<u>ದಿಃ 05-02-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದವರೆದ ಪಾಟೀ ಸವಾಲುಃ ಶ್ರೀ. ಕೆ ಹೆಚ್ ಎ ಪ್ರತಿವಾದಿ ಪರ ವಕೀಲರಿಂದಃ</u>**

ಪ್ರತಿವಾದಿಗೆ ಓದು ಬರಹ ಬರುವುದಿಲ್ಲ ಎಂದರೆ ಸರಿ. ಪ್ರತಿವಾದಿಯ ಮಾಹಿತಿಗೆ ತಾರದೇ ಪ್ರತಿ ವಾದಿಯ ಜಮೀನನ್ನು ಎತ್ತಿಹಾಕುವ ಉದ್ದೇಶದಿಂದ ನಿಪಿ 5 ರ ದಾಖಲೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ 5 ರಂತೆ ಅಳತೆ ಮಾಡಿಸುವ ಬಗ್ಗೆ ಪ್ರತಿವಾದಿಗೆ ಯಾವುದೇ ನೋಟೀಸ್ ಜಾರಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನಿನ ಪಕ್ಕ ನನಗೆ ಸೇರಿದ್ದ 17 ಗುಂಟೆ ಜಮೀನು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ಯಾವುದೇ ಜಮೀನು ಆಸ್ತಿಯನ್ನು ಒತ್ತುವರಿ ಮಾಡದೇ ಇದ್ದರೂ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ವಾದ ಕಾರಣ ಇಲ್ಲದೇ ಸುಳ್ಳು ಪ್ರಕರಣ ದಾಖಲಿಸಿರುವೆ ಎಂದರೆ ಸರಿಯಲ್ಲ. ಯಾವುದೇ ಹೊಸ ವಾದ ಕಾರಣ ಇರದೇ ಸುಳ್ಳು ಪ್ರಕರಣ ದಾಖಲಿಸಿರುವೆ ಎಂದರೆ ಸರಿಯಲ್ಲ. ಪ್ರತಿವಾದಿ ಯಾವತ್ತು ತಪ್ಪು ಮಾಡದೇ ಇದ್ದರೂ ಸಹ ಪ್ರತಿವಾದಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುವೆ ಎಂದರೆ ಸರಿಯಲ್ಲ. ದಾವ ಬಿ ಅನುಸೂಚಿ ಆಸ್ತಿಯನ್ನು ಪ್ರತಿವಾದಿ ಒತ್ತುವರಿ ಮಾಡದೇ ಇದ್ದ ಕಾರಣ ಯಾವುದೇ ಪರಿಹಾರ ನೀಡಲು ಪ್ರತಿವಾದಿ ಬಾಧ್ಯಸ್ಥ ಅಲ್ಲ ಎಂದರೆ ಸರಿಯಲ್ಲ. ದಾವ ಬಿ ಅನುಸೂಚಿ ಆಸ್ತಿಯು ಅಸ್ತಿತ್ವದಲ್ಲಿಯೇ ಇಲ್ಲ ಅದನ್ನು ಸೃಷ್ಟಿಸಿ ಸುಳ್ಳು ಪ್ರಕರಣ ದಾಖಲಿಸಿರುವೆ ಎಂದರೆ ಸರಿಯಲ್ಲ. ಓ ಎಸ್ ನಂ.110/2019 ರ ಸುಳ್ಳು ಪ್ರಕರಣವನ್ನು ಪ್ರತಿವಾದಿಯ ವಿರುದ್ಧ ದಾಖಲಿಸಿ ತೊಂದರೆ ನೀಡಿದ್ದು ಅದರಂತೆಯೇ ಪ್ರಸ್ತುತ ಸುಳ್ಳು ಪ್ರಕರಣ ದಾಖಲಿಸಿ ಪ್ರತಿವಾದಿಗೆ ತೊಂದರೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಎಲ್ಲಾ ದಾಖಲೆಗಳು ಸೃಷ್ಟಿಸಿದ ದಾಖಲೆಗಳು ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲಃ</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.